ತಾವು ಬಂದರೆ ಮತ್ತೆ ಹಳೆಯದನ್ನೆಲ್ಲ ನೆನೆದು ನೊಂದಾಳು ಹುಡುಗಿ ಅಂತ ಅವರಾಡಿದ ಮಾತನ್ನೇಕೆ ನುಂಗಿದಿರಿ' ಎಂದು ತಾರತ್ತಿಗೆಯ ಮಾತನ್ನು ಕತ್ತರಿಸಿದರು.

'ಫಾತಿಮಾ, ಕಾರ್ತಿಕ, ಕೀರ್ತಿಯ ಕೈಗೂ ಮದರಂಗಿ ಹಚ್ಚಿಬಿಡು. ಇಲ್ಲದಿದ್ದರೆ ಮಂಕುಬಡಿದ ಈ ಅಮ್ಮನನ್ನ ಗೋಳು ಹೊಯ್ದುಕೊಳ್ಳುತ್ತಾವೆ' ಎಂದು ಬೇಕಂತಲೇ ಫಾತಿಮಾಳನ್ನು ಅತ್ತ ಕಳಿಸಿ ಸುಧಾಕರ ಕೊಟ್ಟ ಸಣ್ಣ ಚೀಟಿಯನ್ನು ತಾರತ್ತೆಯ ಕಣ್ಣುಗಳನ್ನೂ ತಪ್ಪಿಸಿ ಶಾರಿಯ ಕೈಲಿಟ್ಟಳು ಮಹೇಶ್ವರಿ.

ಸುಧಾಕರನಿಗೆಲ್ಲ ಹೊಸದು ಎಂದು ಒತ್ತಿ ಹೇಳುತ್ತ ಮದುವೆಯನ್ನು ಜೋರಾಗಿಯೇ ಮಾಡಬೇಕು ಎಂದು ಒತ್ತಾಯಿಸಿದವಳು ಅಮ್ಮ, 'ಅವನಿಗೆಲ್ಲ ಹೊಸದು' ಎಂಬ ಮಾತು ಮಗಳನ್ನು ಚುಚ್ಚೀತು ಎನ್ನುವ ಕಲ್ಪನೆ ಬೇಡವೇ ಅವಳಿಗೆ ಎಂದುಕೊಳ್ಳುತ್ತ ಅಸಮಾಧಾನದಿಂದಲೇ ಸುಧಾಕರನ ಪತ್ರ ತೆಗೆದುಕೊಂಡವಳಿಗೆ ಮತ್ತೆ ಪುರುಷೋತ್ತಮನ ಕಾಗೆ ಕಾಲಿನ ಲಿಪಿ ನೆನಪಿಗೆ ಬಂತು ಶಾರಿಗೆ. ಪತ್ರದ 'ಪ್ರೀತಿಯ', 'ನಿನ್ನವ' ಎಂಬ ಎರಡು ಶಬ್ದಗಳನ್ನು ಕಾಟುಹೊಡೆದದ್ದು ಶಾರಿಯ ಕಣ್ಣಿಗೆ ಮೊದಲಿಗೆ ಬಿತ್ತು.

'ಪ್ರೀತಿಯ ನಲ್ಮೆಯ ಶಾರಿಗೆ,

ನಾವಿಬ್ಬರೂ ನಮ್ಮ ನಮ್ಮ ಜಾಗದಲ್ಲಿನ ಅನಿವಾರ್ಯತೆಯಿಂದ ಹತ್ತಿರವಾಗುತ್ತಿರುವವರು. ನಿನ್ನ ಬದುಕಿನಲ್ಲಿ ಕಳೆದುಕೊಂಡ ಪ್ರೀತಿಯನ್ನು ಕೊಡುತ್ತೇನೆಂದು ಹೇಳುವ ಧೈರ್ಯ ನನಗಿಲ್ಲ. ನಿನಗೆ ಬಾಳು ಕೊಡುತ್ತೇನೆ ಎಂದು ಹೇಳುವಷ್ಟು ದೊಡ್ಡವನೂ ನಾನಲ್ಲ... ನಿನ್ನನ್ನು ಮತ್ತು ನಮ್ಮ ಮಕ್ಕಳಾದ ಕಾರ್ತಿಕ, ಕೀರ್ತಿಯರನ್ನು ಎಣೆ ಮೀರಿ ಪ್ರೀತಿಸಲು ನನಗೆ ಸ್ವಲ್ಪ ಸಮಯ ಹಿಡಿಯಬಹುದು. ಆದರೆ ನಿಮ್ಮ ಮೇಲಿನ ಗೌರವ ಆದರಗಳಿಗೆ ಯಾವತ್ತೂ ಕೊರತೆಯಾಗದು. ಅದೇ ಮುಂದೆ ನಮ್ಮ ನಡುವೆ ಬಿಡಿಸಲಾಗದ ಅನುಬಂಧವನ್ನು ಹೆಣೆಯುವುದು ಎನ್ನುವ ನಂಬಿಕೆಯಿದೆ. ನನ್ನ ಈ ಭಾವನೆಗಳನ್ನು ನಿಮ್ಮ ಮೇಲಿನ ಕರುಣೆ ಎಂದಾಗಲೀ, ನನ್ನ ದೊಡ್ಡತನ ಎಂದಾಗಲೀ ಅರ್ಥೈಸದಿದ್ದರೆ ಅದಕ್ಕೆ ನಾನೆಂದೂ ನಿಮಗೆ ಋಣಿ.

ಇಂತಿ ನಿನ್ನವ<br>
ಸುಧಾಕರ'

ಹೌದು ಸುಧಾಕರನೇ...

ಊರ ಮೇಲಿನ ಸಮಾರಾಧನೆಗೆ ಬಡಿಸಲು ಹೋಗುವವನೇ...

ಮನದ ತುಂಬಾ ಭಯವೆಂಬ ಭೂತ ಕುಣಿಯುತ್ತಿದ್ದಾಗ ಸುಧಾಕರನ ಪತ್ರ ನೀಡಿದ ಧೈರ್ಯ ಅವನನ್ನು ಅದೆಷ್ಟು ಹತ್ತಿರ ಕರೆ ತಂದಿತ್ತು, ಢೋಂಗಿಯೆನ್ನಿಸದ ಅವನ ನುಡಿ ಎಷ್ಟೊಂದು ಆಪ್ತತೆ ಮೂಡಿಸಿತ್ತು ಶಾರಿಯಲ್ಲಿ. ಕಾಟು ಹೊಡೆದ ಪದಗಳೆರಡೂ ತನಗಾಗಿಯೇ ಎನ್ನಿಸಿ ಕೈಗೆ ಹಚ್ಚಿದ ಮದರಂಗಿಯಲ್ಲಿ ಸುಧಾಕರನ ಹೆಸರನ್ನು ಹುಡುಕತೊಡಗಿದಳು ಶಾರಿ.


## ಛಾಯಾ ಭಟ್

ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿರುವ ಛಾಯಾ ಭಟ್ ಅರ್ಥಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದಿದ್ದಾರೆ. ಕತೆ, ಲೇಖನಗಳು ಕನ್ನಡದ ದೈನಿಕ ಹಾಗೂ ವಾರಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಮೂಲತಃ ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನವರು.